ಸಿಗುವಾಗ ಬೇಡ ಎನ್ನಲು ಮನಸ್ಸು ಬರಲಿಲ್ಲ. ಊಟದ ಖರ್ಚು ಅದರಲ್ಲೇ ಬಂತು.''

"ಬಾಗಿಲು ತೆರೆದು ನೋಡೋಣವೇ? ನಿಮ್ಮಲ್ಲಿ ಕೀ ಇರಬೇಕಲ್ಲ?'' ಕರಮಚಂದ ವಿಚಾರಿಸಿದ.

ಹೊನ್ನರಾಜುವಿನ ಮೊಗ ಕಪ್ಪಿಟ್ಟಿತು.

"ಮೊದಲಿಗೆ ನಾನೇ ಮನೆಗೆ ಬೀಗ ಕೊಟ್ಟಿದ್ದೆ. ಒಂದು ಕೀ ನನ್ನ ಬಳಿಯೇ ಇತ್ತು. ತಿಂಗಳ ಹಿಂದೆ ಆತ ಬೀಗ ಬದಲಾಯಿಸಿದ. ನಾನು ಆಕ್ಷೇಪಿಸಿದೆ. ಅದ್ಕೆ ಸಂಪಂಗಿ ಬಾಡಿಗೆ ಎರಡು ಸಾವಿರ ಜಾಸ್ತಿ ಮಾಡಿದ, ಆದ್ರೆ ಅದರ ಕೀ ಕೊಡುವುದಿಲ್ಲ ಅಂತ ಹೇಳ್ದ. ನಾನೂ ಒಪ್ಪಿದೆ.''

ಹೊನ್ನರಾಜುವಿನ ಮುಖ ಹುಳ್ಳಗಾಗಿತ್ತು ತಪ್ಪು ಮಾಡಿದವನಂತೆ. ಕರಮಚಂದ ನಿರಾಸೆ ವ್ಯಕ್ತಪಡಿಸಿದ. ನಾವು ಮನೆಗೆ ಒಂದು ಸುತ್ತು ಬಂದೆವು. ಎಲ್ಲಾ ಕಿಟಕಿಗಳೂ ಭದ್ರವಾಗಿ ಮುಚ್ಚಿದ್ದವು.

"ಹೊನ್ನರಾಜು, ನೀವು ಹೇಳಿದ್ರಲ್ಲ, ಒಂದು ಕಿಟಕಿಯ ಬಾಗಿಲು ಸರಿಯಾಗಿ ಇಲ್ಲಾ ಅಂತ...''

"ನಾನು ಅದನ್ನು ತೆರೆದಿದ್ದು ಆತನಿಗೆ ಗೊತ್ತಾಗಿರಬೇಕು. ಅದಕ್ಕೇ ಏನೋ ಸಿಲುಕಿಸಿ ಗಟ್ಟಿಯಾಗಿ ಮುಚ್ಚಿರಬೇಕು. ಇಷ್ಟೆಲ್ಲಾ ಜಾಗ್ರತೆ ಆತ ಯಾಕೆ ಮಾಡ್ತಿದಾನೆ? ಅರ್ಥವಾಗ್ತಿಲ್ಲ.''

ಕರಮಚಂದ ಲೊಚಗುಟ್ಟಿದ. ಮರವೊಂದರ ಗೆಲ್ಲು ಆ ಮನೆಯ ಮಾಡಿನ ಮೇಲೆ ಚಾಚಿಕೊಂಡಿತ್ತು. ನೋಡ ನೋಡುತ್ತಿದ್ದಂತೆ ಕರಮಚಂದ ಷೂ ತೆಗೆದಿರಿಸಿ, ಚಕಚಕನೆ ಮರವೇರಿದ. ಆತನ ಸಾಮರ್ಥ್ಯಕ್ಕೆ ನಾನು ಬೆರಗಾದೆ. ಕೆಲ ಕ್ಷಣಗಳಲ್ಲೇ ಕರಮಚಂದ ಆ ಮನೆಯ ಮಾಡಿನ ಮೇಲೆ ಚಾಚಿಕೊಂಡ ಟೊಂಗೆಯ ಮೂಲಕ ಇಳಿದ. ನಾವು ಕುತೂಹಲದಿಂದ ಆತನನ್ನು ನಿರುಕಿಸುತ್ತಿದ್ದೆವು. ನೋಡ ನೋಡುತ್ತಿದ್ದಂತೆ ಆತ ಕೆಲವು ಹೆಂಚುಗಳನ್ನು ತೆಗೆದು, ಬದಿಗಿರಿಸಿ, ರೀಪುಗಳ ಮಧ್ಯೆ ದೇಹ ತೂರಿಸಿ, ಒಳಕ್ಕೆ ಹಾರಿದ! ನಂತರ ಮನೆಯ ಹಿಂಬಾಗಿಲಿನ ಅಗಳಿ ತೆಗೆದು, ನಮ್ಮನ್ನು ಒಳಗೆ ಆಹ್ವಾನಿಸಿದ.

"ಈ ಮನೆಗೆ ಮುಚ್ಚಿಗೆ ಇಲ್ಲದ್ದರಿಂದ ಒಳಗಡೆ ಜಿಗಿಯಲು ಸಾಧ್ಯವಾಯಿತು. ಮಾಡಿನ ಆ ಭಾಗ ನೋಡುವಾಗಲೇ ಅನುಮಾನ ಬಂತು... ಹಂಚುಗಳು ಅಚ್ಚುಕಟ್ಟಾಗಿ ಕುಳಿತಿರಲಿಲ್ಲ! ಅಂದರೆ ಯಾರೋ ಅದನ್ನು ಪದೇ ಪದೇ ತೆಗೆಯುತ್ತಿರುವಂತೆ ಕಾಣ್ತು. ಯಾರೋ ಅದ್ರ ಮೂಲಕ ಒಳಗೆ ಹೋಗ್ತಿರಬೇಕು ಅಂತ ತರ್ಕಿಸಿದೆ. ನನ್ನ ಊಹನೆ ತಪ್ಪಾಗ್ಲಿಲ್ಲ. ಹೆಂಚು ತೆಗೆದಾಗ ನೇರವಾಗಿ ಕೆಳಗೆ ಇರಿಸಿದ ಕುರ್ಚಿ ಕಾಣಿಸ್ತು. ಕೆಳಗೆ ಇಳಿಯಲೋಸುಗವೇ ಇರಿಸಿದಂತಿದೆ! ಜಂತಿಯ ಒಂದು ತುಂಡನ್ನು ಕತ್ತರಿಸಲಾಗಿದೆ. ದೇಹ ಕೆಳಗೆ ತೂರಿಸಲು ಅದು ಅಗತ್ಯ!! ಸಂಪಂಗಿ ಈ ಮಾರ್ಗದ ಮೂಲಕವೇ ಒಳಗೆ ಬರ್ತಾ ಇದ್ದ ಅನ್ನೋದರಲ್ಲಿ ಸಂಶಯವೇ ಇಲ್ಲ. ಪ್ರಾಯಶಃ ಮತ್ತೆ ಇದೇ ದಾರಿಯಾಗಿ ಹೊರ ಹೋಗುತ್ತಿದ್ದಿರಬೇಕು. ಹೊನ್ನರಾಜು, ಮನೆ ಹಳೇದಾದ್ರೂ ಪಕಾಸಿಗೆ ಬಳಸಿದ ಮರ ಬಹಳ ಗಟ್ಟಿಯಾಗಿರೋದರಿಂದ ಅದನ್ನು ಹಿಡಿದು, ಸಂಪಂಗಿಗೆ ಹೋಗಲು ಸಾಧ್ಯವಾಯಿತು.''

"ಅಂದರೆ ನೀವು ಹೇಳ್ತಾ ಇರೋದು ಸಂಪಂಗಿ ಮನೆಯೊಳಗೆ ಹೀಗೆ ಬರ್ತಾ ಇದ್ದ ಅಂತಾನೆ?'' ಹೊನ್ನರಾಜು ಚಕಿತನಾಗಿದ್ದ.

"ಹೂಂ. ನಾವೀಗ ಮನೆಯ ಪರಿಶೀಲನೆ ಮಾಡುವ.''

ಹಜಾರದಲ್ಲಿದ್ದ ಮೇಜಿನ ಮೇಲೆ ಅರ್ಧ ಉರಿದ ಮೇಣದ ಬತ್ತಿಯೊಂದಿತ್ತು. ಅದರ ಪಕ್ಕದಲ್ಲೇ ಒಡೆಯದ ಎರಡು ಲಕೋಟೆಗಳು ಮತ್ತು ಒಡೆದ ಒಂದು ಲಕೋಟೆ!

"ಸಾರ್, ಸಂಪಂಗಿ ರಾತ್ರಿ ಮನೆಯೊಳಗೆ ಬಂದಿರಲೇಬೇಕು. ನಾನು ನಿನ್ನೆ ಬಾಗಿಲೆಡೆಯಲ್ಲಿ